UASB Library
Newspaper Clippings
Monday 29.08.2022
Pg .1
Jai Kisan

ಬ್ಯಾಚ್ ಮೂಲಕ ಬೆಳೆ

ಅಣಬೆ ಕೃಷಿಗಾಗಿ ಮೂರರಿಂದ ನಾಲ್ಕು ದಿನಗಳ ಕಾಲ ಬೆಳಗ್ಗೆ 5ರಿಂದ 9 ಗಂಟೆವರೆಗೆ ದುಡಿದರೆ ಸಾಕು. ನಂತರ 22 ದಿನ ಕೆಲಸವಿಲ್ಲ. ಬೆಳೆ ಬಂದ ಬಳಿಕ ಕಟಾವು ಮಾಡಿ ಮಾರುಕಟ್ಟೆ ಮಾಡುವ ಕಾರ್ಯ ಇರಲಿದೆ. ಸುನೀಲ್, ಮೂರು ಕೋಣೆಗಳನ್ನು ಮಾಡಿಕೊಂಡು ಒಂದರ ನಂತರ ಒಂದರಂತೆ ಬೆಳೆ ತೆಗೆಯುತ್ತಾರೆ. ಹಾಗಾಗಿ, ಇವರಲ್ಲಿ ಸದಾ ಅಣಬೆ ಸಿಗುತ್ತದೆ. ಅಣಬೆ ಕಟಾವಾದ ಕೂಡಲೇ 200 ಗ್ರಾಂ ಮತ್ತು ಅರ್ಧ ಕೆಜಿ ಪ್ಯಾಕ್ ಮಾಡಿ ಮಡಿಕೇರಿಯರೆಗೂ ಮಾಲ್‌ಗಳು, ದಿನಸಿ ಅಂಗಡಿಗಳಿಗೆ ಬೆಳಗ್ಗೆ 10 ಗಂಟೆಯೊಳಗೆ ಸರಬರಾಜು ಮಾಡುತ್ತಾರೆ. ಯಾಕೆಂದರೆ, ಅಣಬೆ ಆಯಸ್ಸು ಕೇವಲ ಒಂದು ದಿನ ಮಾತ್ರ.



ಹುಲ್ಲನ್ನು ಒಣಗಿಸುವ ಯಂತ್ರ

ಅಣಬೆ ಕೃಷಿಗೆ ಭತ್ತದ ಹುಲ್ಲು ಅತ್ಯವಶ್ಯ. ಹುಲ್ಲನ್ನು ರಾತ್ರಿಯಿಡೀ ನೀರಿನಲ್ಲಿ ನೆನೆಸಿ ಬೆಳಗ್ಗೆ ಸೋರುಹಾಕಿ ನೀರಿನ ಅಂಶ ಕಮ್ಮಿಯಾದ ನಂತರ ಸ್ಟೀಮ್ ಮೂಲಕ 2 ಗಂಟೆ ಹಬೆ ನೀಡಬೇಕು. ಹುಲ್ಲಿನಲ್ಲಿರಬಹುದಾದ ಸೂಕ್ಷ್ಮಾಣು ಜೀವಿಗಳನ್ನು ಈ ಮೂಲಕ ನಿಯಂತ್ರಿಸಲು ಸಾಧ್ಯ. ನಂತರ ಬೀಜಗಳನ್ನು ಹಾಕಲು ಬಳಸಬೇಕು. ಮಳೆ ಮತ್ತು ಮೋಡ ಕವಿದ ವಾತಾವರಣವಿದ್ದಾಗ ಹುಲ್ಲನ್ನು ಒಣಗಿಸುವುದು ಕಷ್ಟಸಾಧ್ಯ. ಇದರಿಂದ ಬಚಾವಾಗಲು ಸುನೀಲ್ ಸ್ವತಃ ಒಂದು ಯಂತ್ರೋಪಕರಣ ಆವಿಷ್ಕರಿಸಿದ್ದಾರೆ. ಈ ಯಂತ್ರಕ್ಕೆ ಪೆಟ್ರೋಲ್, ಡೀಸೆಲ್, ವಿದ್ಯುತ್ ಯಾವುದೂ ಅಗತ್ಯವಿಲ್ಲ.

29.08.2022
Vijaya Vani P.11

ದಿ ರೈತ ಮಿತ್ರ

ಸೇವಂತಿಗೆಯಲ್ಲಿ ಹೆಚ್ಚಾಗಿ ಕೀಟಗಳ ಬಾಧೆ ಕಂಡುಬರುತ್ತಿದ್ದು, ಅವುಗಳ ನಿವಾರಣೆ ಹೇಗೆ?

। ಅಶ್ವತ್ಥ್‌ನಾರಾಯಣ ಚಿಕ್ಕಬಳ್ಳಾಪುರ

ಸೇವಂತಿಗೆಯು ಒಂದು ಪ್ರಮುಖ ವಾಣಿಜ್ಯ ಬೆಳೆ. ಇತ್ತೀಚೆಗೆ ಈ ಬೆಳೆಯನ್ನು ರಾಜ್ಯದಲ್ಲಿ ಹೆಚ್ಚಾಗಿ ಬೆಳೆಯುತ್ತಿದ್ದು, ರೈತರು ಉತ್ತಮ ಆದಾಯ ಪಡೆಯುತ್ತಿದ್ದಾರೆ. ಆದರೆ, ಈ ಬೆಳೆಯಲ್ಲಿ ಕಂಡು ಬರುವ ಕೆಲವು ಕೀಟಗಳಿಂದ ಇಳುವರಿಯಲ್ಲಿ ತೊಂದರೆಯುಂಟಾಗುತ್ತಿದೆ. ಪ್ರಮುಖ ಕೀಟಗಳೆಂದರೆ, ಥ್ರಿಪ್ಸ್, ಹೇನು, ಮೊಗ್ಗು ಕೊರೆಯುವ ಹುಳು, ಕಂಬಳಿ ಹುಳು, ಕೆಂಪು ನುಸಿ, ಎಲೆ ತಿನ್ನುವ ಹುಳು, ಮುಂತಾದವು.

ನಿರ್ವಹಣೆ: ಈ ಕೀಟಗಳ ಬಾಧೆ ಕಂಡು ಬಂದಲ್ಲಿ ಪ್ರತಿ ಲೀಟರ್ ನೀರಿಗೆ 3 ಮಿ.ಲೀ. ಬೇವಿನ ಎಣ್ಣೆ ಅಥವಾ 1.7 ಮಿ.ಲೀ. ಡೈಮೀಥೋಯೇಟ್ ಅಥವಾ 0.5 ಮಿ.ಲೀ. ಡೆಮಾಕ್ರನ್ ಕೀಟನಾಶಕ ಬೆರೆಸಿ ಸಿಂಪಡಿಸಿ. ನುಸಿ ಬಾಧೆ ಹೆಚ್ಚಾಗಿದ್ದಲ್ಲಿ 2.5 ಮಿ.ಲೀ. ಡೈಕೋಫಾಲ್ ಅಥವಾ ಗಂಧಕವನ್ನು ಧೂಳೀಕರಿಸಿ.

। ಡಾ. ಶಾಲಿನಿ ಎಂ.
ತೋಟಗಾರಿಕೆ ತಜ್ಞರು

ಸೋಯ ಅವರೆ ಬೆಳೆಯಲ್ಲಿ ಎಲೆ ತಿನ್ನುವ ಹುಳಗಳ ಹಾವಳಿ ಹೆಚ್ಚಾಗಿದ್ದು, ಇದನ್ನು ನಿಯಂತ್ರಿಸುವುದು ಹೇಗೆ?

। ಸಂತೋಷ್ ಪಾಟೀಲ್ ಹುಬ್ಬಳ್ಳಿ

ಸೋಯ ಅವರೆ ಬೆಳೆಯಲ್ಲಿ ಎಲೆ ತಿನ್ನುವ ಹುಳಗಳು ಎಲೆಗಳನ್ನು ರಂಧ್ರಗಳಂತೆ ಕೊರೆದು ತಿನ್ನುತ್ತವೆ, ಈ ಹುಳುಗಳು ಗುಂಪಿನಲ್ಲಿ ಎಲೆಗಳನ್ನು ಕೆರೆದು ತಿಂದಾಗ ಜಾಲರಿಯಂತೆ ಕಾಣುತ್ತವೆ. ಬೆಳೆದ ಕಂಬಳಿ ಹುಳುಗಳು ಎಲೆಗಳನ್ನು ಪೂರ್ತಿಯಾಗಿ ತಿಂದು ನಡುದಿಂಡನ್ನು ಮಾತ್ರ ಬಿಡುತ್ತವೆ. **ನಿರ್ವಹಣೆ:** ಪ್ರತೀ ಲೀಟರ್ ನೀರಿನಲ್ಲಿ 1 ಮಿ.ಲೀ. ಮಾನೋಕ್ರೋಟೊಫಾಸ್ 36 ಎಸ್.ಎಲ್. ಅಥವಾ 2 ಮಿ.ಲೀ. ಕ್ಲೋರ್‌ಪೈರಿಫಾಸ್ 20 ಇ.ಸಿ ಅಥವಾ 0.5 ಗ್ರಾಂ ಇಮಾಮೆಕ್ಟಿನ್ ಬೆಂಜೊಯೇಟ್ 5% ಎಸ್.ಜಿ ನೇರಿಸಿ ಸಿಂಪಡಿಸಬೇಕು. **ಸೂಚನೆ:** ಹುಳುಗಳು ಸಣ್ಣದಿರುವಾಗ ಸಿಂಪರಣೆ ಮಾಡುವುದು ಹೆಚ್ಚು ಪರಿಣಾಮಕಾರಿ.

। ಕು. ಪ್ರಿಯಾಂಕ, ಬಿ. ಸಸ್ಯರೋಗ ತಜ್ಞರು



ಸಾವಯವ ಕೃಷಿಯಲ್ಲಿ ಕಳೆ ನಿಯಂತ್ರಣದ ಬಗ್ಗೆ ತಿಳಿಸಿ?

ಶಿವಕುಮಾರ್ ಕಡೂರು ತಾಲ್ಲೂಕು

ಸಾವಯವ ಕೃಷಿಯಲ್ಲಿ ಕಳೆಗಳ ನಿಯಂತ್ರಣ ಒಂದು ಪ್ರಮುಖ ಸವಾಲು. ಸಾವಯವ ಕೃಷಿಯಲ್ಲಿ ಸಸ್ಯ ಮತ್ತು ಪ್ರಾಣಿ ಮೂಲದ ಸಾವಯವ ಗೊಬ್ಬರಗಳನ್ನು ಯಥೇಚ್ಛವಾಗಿ ಬಳಸುವುದರಿಂದ ಹಾಗೂ ರಸಾಯನಿಕ ಕಳೆನಾಶಕಗಳನ್ನು ಬಳಸದೆ ಇರುವುದರಿಂದ ಹೆಚ್ಚು ಪ್ರಮಾಣದ ಕಳೆಗಳು ಕಂಡು ಬರುತ್ತವೆ.

ಕಳೆ ನಿರ್ವಹಣೆ ಕ್ರಮಗಳು: ಆಳವಾದ ಉಳುಮೆ; ಜೀವಂತ ಹೊದಿಕೆ ಹಾಗೂ ಸಾವಯವ ಹೊದಿಕೆಗಳನ್ನು ಬೆಳೆಸುವುದು; ಬೆಳೆ ಪರಿವರ್ತನೆಯಲ್ಲಿ ವೈವಿಧ್ಯ ಬೆಳೆಗಳನ್ನು ಬೆಳೆಯುವುದು; ಶಾಖ ಅಥವಾ ಉಷ್ಣಾಂಶದ ಉಪಚಾರ; ಅಂತರ ಬೆಳೆಗಳನ್ನು ಬೆಳೆದು ಕಳೆಗಳ ಬೆಳವಣಿಗೆಗೆ ತಡೆ ಗಟ್ಟುವುದು ಕಳೆಗಿಂತಲೂ ತೀವ್ರವಾಗಿ ಬೆಳೆಯುವ ಬೆಳೆ/ತಳಿಗಳನ್ನು ಬೆಳೆಯುವುದು; ಸೂಕ್ತ ನೀರಿನ ನಿರ್ವಹಣೆ ಕ್ರಮಗಳನ್ನು ಅಳವಡಿಸುವುದು; ಜೈವಿಕ ಕೀಟ ನಿಯಂತ್ರಣ ಅಳವಡಿಸುವುದು; ಕೂಲಿಕಾರ್ಮಿಕರಿಂದ ಬೌತಿಕವಾಗಿ ಕಳೆ ತೆಗೆಸುವುದು; ಕಳೆಗಳು ಹೂವಿನ ಹಂತದಲ್ಲಿರುವಾಗಲೇ ಮಣ್ಣಿಗೆ ಸೇರಿಸುವುದು ಅಥವಾ ಹೊದಿಕೆಯಾಗಿ ಬಳಸುವುದು.

। ಶ್ರೀ ಹರ್ಷಕುಮಾರ್ ಎಸ್.ಎಸ್. ಬೇಸಾಯ ತಜ್ಞರು

29.08.2022
Vijaya Vani P.11

ಗೋಧಿ ಹಿಟ್ಟು, ಮೈದಾ, ರವೆ ರಫ್ತು ನಿರ್ಬಂಧ

ನವದೆಹಲಿ: ಗೋಧಿ ಹಿಟ್ಟು, ಮೈದಾ, ರವೆ ಮತ್ತು ಹೊಟ್ಟು (ತವಡು) ತೆಗೆಯದ ಗೋಧಿ ಹಿಟ್ಟಿನ ರಫ್ತನ್ನು ಕೇಂದ್ರ ಸರ್ಕಾರ ಶನಿವಾರ ನಿಷೇಧಿಸಿದೆ. ಈ ಹಿಂದೆ ಮೇ ತಿಂಗಳಲ್ಲಿ ಸರ್ಕಾರ ಗೋಧಿ ರಫ್ತನ್ನೂ ನಿಷೇಧಿಸಿತ್ತು. ಹಿಟ್ಟು ಮತ್ತು ರವೆ ನಿಷೇಧದ ಕೇಂದ್ರ ಸಚಿವ ಸಂಪುಟದ ನಿರ್ಧಾರವನ್ನು ಪ್ರಕಟಿಸಿದ ವಿದೇಶಿ ವ್ಯಾಪಾರ ಮಹಾ ನಿರ್ದೇಶನಾಲಯ (ಡಿಜಿಎಫ್‌ಟಿ), ಕೆಲವು ವಿಶೇಷ ಸಂದರ್ಭಗಳಲ್ಲಿ ಕೇಂದ್ರದ ಅನುಮತಿ ಪಡೆದು ಈ ವಸ್ತುಗಳ ರಫ್ತಿಗೆ ಅನುಮತಿ ನೀಡಲಾಗುತ್ತದೆ ಎಂದು ತಿಳಿಸಿದೆ. ಸರಕುಗಳ ಬೆಲೆಯೇರಿಕೆ ತಡೆಯಲು ಆಗಸ್ಟ್ 25ರಂದು ಗೋಧಿ ಅಥವಾ ಮೆಸ್ಲಿನ್ ಹಿಟ್ಟಿನ ರಫ್ತಿನ ಮೇಲೆ ನಿರ್ಬಂಧಗಳನ್ನು ಹಾಕಲು ಸರ್ಕಾರ ನಿರ್ಧರಿಸಿತ್ತು. ರಫ್ತು ನಿರ್ಬಂಧಗಳು ಅಥವಾ ನಿಷೇಧದಿಂದ ಗೋಧಿ ಅಥವಾ ಮೆಸ್ಲಿನ್ ಹಿಟ್ಟಿಗೆ ವಿನಾಯಿತಿ ನೀಡುವ ನೀತಿಗೆ ತಿದ್ದುಪಡಿ ತರುವ ಪ್ರಸ್ತಾಪವನ್ನು ಕ್ಯಾಬಿನೆಟ್ ಸಮಿತಿ ಅನುಮೋದಿಸಿದೆ ಎಂದು ಸರ್ಕಾರ ಹೇಳಿಕೆಯಲ್ಲಿ ತಿಳಿಸಿದೆ.

29.08.2022
Vijaya Vani P.09

ಶಿವು ಹುಣಸೂರು

ಅಣಬೆ ಬೇಸಾಯ ಉತ್ತಮ ಆದಾಯ

ಯುವ ಕೃಷಿಕನೊಬ್ಬ ಅಣಬೆ ಬೇಸಾಯದ ಮೂಲಕ ಆರ್ಥಿಕವಾಗಿ ಸ್ವಾವಲಂಬನೆ ಗಳಿಸಿದ್ದಾರೆ. ಅಣಬೆ ಕೃಷಿಗೆ ಅಗತ್ಯವಾದ ಯಂತ್ರೋಪಕರಣವನ್ನೂ ತಾವೇ ಅಭಿವೃದ್ಧಿಪಡಿಸಿರುವುದು ಇವರ ಮತ್ತೊಂದು ವಿಶೇಷ. ಹುಣಸೂರು ನಗರ ಹೊರವಲಯದ ಹಾಲಗೆರೆಯ ವೆಂಕಟೇಶ್ -ಗೌರಮ್ಮ ದಂಪತಿಯ ಪುತ್ರ ಸುನೀಲ್, ಅಣಬೆ ಕೃಷಿಯಲ್ಲಿ ತೊಡಗಿರುವ ಯುವಕ. ಖಾಸಗಿ ಮೊಬೈಲ್ ಕಂಪನಿಯ ಮಾರುಕಟ್ಟೆ ವಿಭಾಗದಲ್ಲಿ ಕೆಲಸಮಾಡುತ್ತಿದ್ದ ಸುನೀಲ್, ದಿನವಿಡೀ ದುಡಿದರೂ ಸಂಪಾದನೆ ಅಷ್ಟಕ್ಕಷ್ಟೇ ಇತ್ತು. ಈ ನಡುವೆ, ಅಣಬೆ ಕೃಷಿ ಬಗ್ಗೆ ಮಾಧ್ಯಮಗಳಲ್ಲಿ ಗಮನಿಸಿದ ಸುನೀಲ್, ತಾವೇಕೆ ಅಣಬೆ ಕೃಷಿ ಮಾಡಬಾರದೆಂದು ಯೋಚಿಸಿ ಹೊಸ ಕಾರ್ಯಕ್ಕೆ ಕೈಹಾಕಿದರು. ಎರಡು ವರ್ಷದ ಪರಿಶ್ರಮದಿಂದಾಗಿ ಪ್ರಸ್ತುತ ಅಣಬೆ ಕೃಷಿಯಲ್ಲಿ ಯಶಸ್ಸು ಸಾಧಿಸಿ ಮಾರುಕಟ್ಟೆಯನ್ನೂ ಕಂಡುಕೊಂಡಿದ್ದು, ಉತ್ತಮ ಲಾಭ ಗಳಿಸುತ್ತಿದ್ದಾರೆ.

ಶಿವು ಅಣಬೆ: ಸುನೀಲ್ ಶಿವು ಅಣಬೆಯ ಕೃಷಿ ಕೈಗೊಂಡಿದ್ದು, ಮೈಸೂರಿನ ತೋಟಗಾರಿಕೆ ಇಲಾಖೆಯಿಂದ ಅಣಬೆ ಬೀಜ(ಸ್ಪಾನ್) ಖರೀದಿಸುತ್ತಾರೆ. 12*18 ಇಂಚಿನ ಪಾಲಿಥಿನ್ ಕವರ್‌ಗಳಲ್ಲಿ ಭತ್ತದ ಹುಲ್ಲಿನ ನಡುವೆ 3-4 ಹಂತಗಳಲ್ಲಿ ಬೀಜಗಳನ್ನು ಹಾಕಿ ಕವರ್ ಮುಚ್ಚಿಡುತ್ತಾರೆ. ಅದ್ದನೆ ದಾರದಲ್ಲಿ ಮಾಡಿರುವ ಸ್ಯಾಂಡ್‌ನಲ್ಲಿ ಅದನ್ನು ಇರಿಸುತ್ತಾರೆ. ಅಣಬೆ ಕೃಷಿಗೆ ಕತ್ತಲ ಕೋಣೆಯ ಅಗತ್ಯವಿರುತ್ತದೆ. ಕೋಣೆಯ ನೆಲ ಮತ್ತು ಗೋಡೆಗಳು ಮಬ್ಬಿನಿಂದ ಕೂಡಿರಬೇಕು. ಕಾರಣ ಅಣಬೆ ಬೆಳೆಯಲು ತೇವಾಂಶದ ಹವಾಮಾನ (14-16 ಡಿಗ್ರಿ ಸೆ.) ಅತ್ಯಗತ್ಯ. ಅಣಬೆ ಬೆಳೆಸಲು ಮರದ ಅಥವಾ ಪ್ಲಾಸ್ಟಿಯದೇ ಲೋಹದ ಸ್ಯಾಂಡ್ ಗಳನ್ನು ಸುನೀಲ್ ಬಳಸುತ್ತಿಲ್ಲ. ಪ್ಲಾಸ್ಟಿಕ್ ದಾರದ ನೇತು ಹಾಕುವ ಸ್ಯಾಂಡ್‌ಗಳೇ ಸಾಣಿಗುತ್ತವೆ ಎನ್ನುತ್ತಾರೆ ಅವರು. ಇದನ್ನು ನಿರ್ಮಿಸಿಕೊಳ್ಳಲು ಖರ್ಚು ಕೂಡ ಕಡಿಮೆ. ಒಮ್ಮೆ ಬೀಜಗಳನ್ನು ಕವರ್‌ನಲ್ಲಿ ಹಾಕಿದ ನಂತರ 20-22 ದಿನಗಳ ಕಾಲ ಬೀಜಗಳಿಗೆ ಬೆಳಕು ತಾಗಬಾರದು. 20 ದಿನಗಳ ನಂತರದ 20 ದಿನಗಳ ಕಾಲ ಅಣಬೆ ಬೆಳೆಯುತ್ತಲೇ ಇರುತ್ತದೆ.





ಗ್ರೀನ್ ಫಂಗಸ್ ರೋಗ

ತೇವಾಂಶದ ವೈಪರೀತ್ಯದಿಂದಾಗಿ ಅಣಬೆಗೆ ಗ್ರೀನ್ ಫಂಗಸ್ (ಪಾಚಿರೋಗ) ತಗಲುತ್ತದೆ. ಬಾವಿಸ್ಟಿನ್ ಔಷಧವನ್ನು ಸಿರಿಂಜ್ ಮೂಲಕ ಹಸಿದು ಪಾಚಿಯಾಗಿರುವ ಸ್ಥಳಕ್ಕೆ ನೀಡಿದಲ್ಲಿ ರೋಗ ವಾಸಿಯಾಗುತ್ತದೆ.

ಆರೋಗ್ಯಪೂರ್ಣ ಆಹಾರ

ಅಣಬೆ ರುಚಿಯಷ್ಟೇ ಅಲ್ಲ, ಅತ್ಯುತ್ತಮ ಹಾಗೂ ಆರೋಗ್ಯಪೂರ್ಣ ಆಹಾರವೂ ಹೌದು. ವಿಟಮಿನ್ ಡಿ ಯುಕ್ತ, ಆ್ಯಂಟಿ ಆಕ್ಸಿಡೆಂಟ್, ರೋಗನಿರೋಧಕ ಶಕ್ತಿ ವೃದ್ಧಿಸುತ್ತದೆ. ಕ್ಯಾನ್ಸರ್ ವಿರುದ್ಧ ಹೋರಾಡಲು, ಆರೋ ಇಮ್ಯೂನ್ ಕಾಯಿಲೆಗಳನ್ನು ನಿರ್ವಹಿಸಲು, ಆಯಿಸ್ಟರ್ ಮಶ್ರೂಮ್ ಉತ್ತಮ ಔಷಧವಾಗಿ ಪರಿಗಣಿತವಾಗಿದೆ. ಆ್ಯಂಟಿ ಮೈಕ್ರೋಬಿಯಲ್, ಆ್ಯಂಟಿ ವೈರಲ್, ರಕ್ತದಲ್ಲಿ ಸಕ್ಕರೆ ಅಂಶವನ್ನು ನಿಯಂತ್ರಿಸುವ, ಕೆಟ್ಟ ಕೊಲೆಸ್ಟಾಲ್ ಮತ್ತು ಟ್ರೈಗ್ಲಿಸರೈಡ್ಸ್ ಅಂಶ ಕಡಿಮೆ ಗೊಳಿಸುತ್ತದೆ. ಆಯಿಸ್ಟರ್ ಮಶ್ರೂಮ್ ಅನ್ನು ಒಣಗಿಸಿ ಪುಡಿ ಮಾಡಿ ಜೋಳದ ರೊಟ್ಟಿ ಜತೆಯಲ್ಲಿ ಸೇವಿಸುತ್ತಾರೆ.





ತಿಂಗಳಿಗೆ 30 ಸಾವಿರ ರೂ. ಆದಾಯ

ಒಂದು ಕೆಜಿ ಬೀಜದಲ್ಲಿ 5-6 ಕೆಜಿ ಅಣಬೆ ಇಳುವರಿ ಪಡೆಯಲು ಸಾಧ್ಯ. ಒಂದರ ನಂತರ ಒಂದರಂತೆ ಬೆಳೆ ತೆಗೆದರೆ ತಿಂಗಳಿಗೆ ಖರ್ಚು ಕಳೆದು ಕನಿಷ್ಠ 30 ಸಾವಿರ ರೂ. ಆದಾಯ ಗಳಿಸಲು ಸಾಧ್ಯವೆನ್ನುತ್ತಾರೆ ಸುನೀಲ್. ಅಣಬೆ ಕಲಾವಳಿ ಭಾಗದ ಜನರ ಅಚ್ಚುಮೆಚ್ಚಿನ ಆಹಾರ. ಮೈಸೂರು ವ್ಯಾಪ್ತಿಯಲ್ಲೂ ಅಣಬೆಯನ್ನು ಆಹಾರವಾಗಿ ಬಳಸುವವರ ಸಂಖ್ಯೆ ಹೆಚ್ಚಾಗುತ್ತಿದ್ದು, ಗುಣಮಟ್ಟದ ಅಣಬೆಗೆ ಬೇಡಿಕೆ ಇದ್ದೇಇದೆ. ಸುನೀಲ್ ಅವರನ್ನು ಸಂಪರ್ಕಿಸಲು: 99648 85050

29.08.2022
Vishwavani P.10

ಹೂಗಳ ಬೆಲೆ ಏರಿಕೆ

ಬೆಂ.ಗ್ರಾ.ಮಾಂತರ: ಈ ಮಾಸದ ಮೊದಲ ವಾರದಲ್ಲಿಯೇ ಗೌರಿ-ಗಣೇಶ ಹಬ್ಬ ಬಂದಿರುವ ಕಾರಣ ರೈತರು ಬೆಳೆದಿರುವ ಹೂವಿಗೆ ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ಬಂದಿದೆ. ಮಳೆ ಕೊರತೆಯಿಂದ ಬಹಳಷ್ಟು ರೈತರು ತಮ್ಮ ತೋಟಗಳಲ್ಲಿ ಬೆಳೆದಿದ್ದ ಹೂವಿನ ಗಿಡಗಳನ್ನು ಕಿತ್ತು ಹಾಕಿದ್ದರು. ಈ ಕಾರಣದಿಂದ ಬೆಳೆಯುವವರ ಸಂಖ್ಯೆಯೂ ಕಡಿಮೆಯಾಗಿತ್ತು. ಹೂ ಬೆಳೆಯುವ ಪ್ರಮಾಣ ಕುಸಿದಿದ್ದರಿಂದ ಮಾರುಕಟ್ಟೆಯಲ್ಲಿ ಹೂವಿನ ಆವಕ ಕಡಿಮೆಯಾಗಿದೆ. ದೇವನಹಳ್ಳಿ ತಾಲ್ಲೂಕಿನಲ್ಲಿ ಪ್ರಮುಖವಾಗಿ ಸೇವಂತಿಗೆ, ಗುಲಾಬಿ, ಚೆಂಡು ಹೂ, ಕನಕಾಂಬರ, ಕಾಕಡ, ಮಲ್ಲಿಗೆ ಹೂವು ಬೆಳೆಯುತ್ತಾರೆ. ಈ ಭಾಗದ ರೈತರು ಹೂವನ್ನು ಚಿಕ್ಕಬಳ್ಳಾಪುರದ ಮಾರುಕಟ್ಟೆಗೆ ಸರಬರಾಜು ಮಾಡುತ್ತಾರೆ. ಮಾರುಕಟ್ಟೆಯಲ್ಲಿ ಬೆಳಿಗ್ಗೆ 10 ಗಂಟೆ ವೇಳೆಗೆ ಹೂವಿನ ವಹಿವಾಟು ಆರಂಭವಾಗುತ್ತದೆ. ಪ್ರತಿನಿತ್ಯ ಮಧ್ಯಾಹ್ನ 12 ಗಂಟೆ ವೇಳೆಗೆ ತಾಜಾ ಹೂವಿನ ಆವಕವಾಗುತ್ತದೆ.

29.08.2022
Vijaya Vani P.11

Pandemic propels agri-tech startups

Raise $1.3 bn this year; experts say lot of headroom to grow further

PRATHIK DESAI
BENGALURU, DHNS

In what has been a rather dull year for Indian start-ups – marked by smaller funding amounts and fewer unicorns – businesses in the agriculture and agri-tech space managed to raise as much as $1.32 billion. This is more than six times the funds raised by the sector during the same period last year.

The sector has a lot of headroom to grow in the coming days due to rising tech penetration, industry insiders and experts told *DH*. That is good news for Asia's third-largest economy, where agriculture, with its allied sectors, is the largest source of livelihood.

As more farmers adopt technology and improve predictability by basing their decisions on data, "there is no looking back in terms of funding and financing that will come to this industry," said Saumya Kumar, the director of ISB's startup incubator, I-Venture. The last five years saw the birth of about a fifth of India's agri-tech and agriculture startups, while the last five months alone accounted for 35% of all funds raised by the sector so far, showed data from Crunchbase, which is a platform that tracks private companies.

Although scaled startups and organised players are disrupting the space, they have barely scratched the surface, according to Chinna Pardhasaradhi, CFO of agri-culture supply chain start-up WayCool Foods. "Both of them, combined, don't constitute 1% of the total addressable market," Pardhasaradhi added.

▸ Startups, Page 4



Factors behind rise
Conducive policy framework, increasing internet and smartphone usage in rural areas, enhanced adoption of digital solutions

How they helped
Startups in the sector have played a vital role in helping farmers get access to finance, AI-driven data and better markets, to name a few

The challenges
Farming techniques, access to markets and accurate weather data, concentration of funding in some streams of products

29.08.2022
Deccan Herald P.01

ತಾರಸಿಯಲ್ಲಿ ಕೃತೋಟ ತಯಾರಿಕೆಗೆ ತರಬೇತಿ



ದಾಸರಹಳ್ಳಿ: ಮನೆಯ ಚಿಕ್ಕ ತಾರಸಿಯಲ್ಲಿ ಕೈತೋಟ ಸೃಷ್ಟಿಸಿ ತರಕಾರಿ, ಹಣ್ಣು ಬೆಳೆಯುವ ವಿಧಾನ ಮತ್ತು ಅದರ ಮಹತ್ವವನ್ನು ತಿಳಿಸಲಾಗುತ್ತಿದೆ ಎಂದು ಬೆಂಗಳೂರು ಜಾಲಹಳ್ಳಿ ರೋಟರಿ ಅಧ್ಯಕ್ಷ ಪ್ರಕಾಶ್ ತಿಳಿಸಿದರು.

• ವಿಶ್ವಕೈತೋಟ ದಿನ ಪ್ರಯುಕ್ತ ಊಟ ಫ್ರಮ್ ಯುವರ್ ತೋಟ ಕಾರ್ಯಕ್ರಮ

ಜಾಲಹಳ್ಳಿಯ ಎಚ್‌ಎಂಟಿ ಮೈದಾನದಲ್ಲಿ ವಿಶ್ವ ಕೈತೋಟ ದಿನದ ಪ್ರಯುಕ್ತ ಗಾರ್ಡನ್ ಸಿಟಿ ಫಾರ್ಮರ್ಸ್ ಮತ್ತು ರೋಟರಿ ಜಾಲಹಳ್ಳಿ ಹಾಗೂ ಇನ್ನಿತರ ಸಂಸ್ಥೆಗಳ ಆಶ್ರಯದಲ್ಲಿ ಆಯೋಜಿಸಿದ್ದ 'ಊಟ ಫ್ರಮ್ ಯುವರ್ ತೋಟ' ಎಂಬ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ತಾರಸಿ ತೋಟಗಳೆಂದರೆ ಕೇವಲ ಹೂವು, ಅಲಂಕಾರಿಕ ಗಿಡಗಳನ್ನು ಬೆಳೆಯುವುದಷ್ಟೇ ಅಲ್ಲ ತಾಜಾ, ಸುರಕ್ಷಿತ ಮತ್ತು ಪೌಷ್ಟಿಕ ಹಣ್ಣು ಮತ್ತು ತರಕಾರಿಗಳು ಬೆಳೆಯುವ ವಿಧಾನ, ತಾರಸಿತೋಟದ ಬಗ್ಗೆ ತರಬೇತಿ ನೀಡಲಾಗುತ್ತದೆ ಎಂದರು.

ಪರಿಸರವಾದಿ ರಾಮ್ ಪ್ರಸಾದ್ ಮಾತನಾಡಿ, ನಗರವಾಸಿಗಳು ಸಾಧ್ಯವಾದ ಎಲ್ಲಾ ರೀತಿಯ ತರಕಾರಿಗಳ ಮತ್ತು ಇತರ ಬೆಳೆಗಳನ್ನು ತಾರಸಿಯಲ್ಲಿ ಬೆಳೆದು ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳಬಹುದು ಎಂದರು. ಕಾರ್ಯಕ್ರಮದಲ್ಲಿ ಕೃಷಿ, ತೋಟಗಾರಿಕೆ, ಸಾವಯವ ಗೊಬ್ಬರ ತಯಾರಿಕೆ, ಕೆರೆ ಕಟ್ಟೆಗಳ ಮಹತ್ವದ ಕುರಿತು ತಿಳಿಸಿಕೊಡಲಾಯಿತು. ಪ್ರದರ್ಶನದಲ್ಲಿ 50ಕ್ಕೂ ಹೆಚ್ಚು ಮಳಿಗೆಗಳನ್ನು ತೆರೆಯಲಾಗಿತ್ತು. ಮಕ್ಕಳಿಗೆ ಚಿಣ್ಣರ ಕೈತೋಟ, ಮನೆಗಳಲ್ಲಿ ಗೊಬ್ಬರ, ಈ ತ್ಯಾಜ್ಯ, ಮಣ್ಣಿನ ಗಣೇಶ ಮೂರ್ತಿ, ಚೀಲ ಹೊಳ ಸ್ಪರ್ಧೆ ಕೂಡ ನಡೆಯಿತು. ಈ ವೇಳೆ ಪಾಲಿಕೆ ಮಾಜಿ ಸದಸ್ಯ ಶ್ರೀನಿವಾಸ್ ಮೂರ್ತಿ, ಹೊಸ ಚಿಗುರು ಸಂಸ್ಥೆ ಅಧ್ಯಕ್ಷ ಅಶೋಕ್ ಜಯಂತ್, ಅಶ್ವತ್ಥನಾರಾಯಣ, ಡಾ।ಎಸ್. ರಾಜೇಶ್, ಶ್ರೀನಿವಾಸ್ ಮೂರ್ತಿ ಇತರರಿದ್ದರು.

29.08.2022
Udayavani P.05

Coconut shells open up new avenues for state farmers

VARSHA GOWDA
BENGALURU, DHNS

The humble coconut shell is seeing a spike in demand, thanks to the increased use of activated carbon and shell charcoal in various industries. As a result, even though copra rates were down this year, coconut farmers remain unfazed.



In five years, the price of a tonne of coconut shells has almost doubled. "We used to get anywhere between Rs 7,000 and Rs 8,000, whereas it's about Rs 14,500 and above for a tonne now," says Sreeharsha, a coconut farmer from Thimlapura village in Hassan district.

Industries that process these shells use them in handicraft, agarbathis and biofertilisers. Shell charcoal and activated carbon are used for melting and purifying metals, engine oil, water purification, paints and medication. Trends in skincare have also upped the demand.

Karnataka is the third largest producer of coconuts in the country after Kerala and Tamil Nadu. India produces 34% of the world's supply of coconuts. This year, the export of coconut and related products totalled Rs 3,237 crore, with shipments increasing by almost 40% from Rs 2,294 crore last year.

The result, as coconut farmer Pratham Kumar will tell you, is that no shells are spared in his village Chikkanayakanahalli in Tumakuru. "Aggregators come to every home. Sometimes farmers hire autos and tractors to transport shells if they have sufficient quantities," he says.

▸ Coconut, Page 4

29.08.2022
Deccan Herald P.01

ಆವಿಷ್ಕಾರಗಳು ಕೃಷಿ ಅಭಿವೃದ್ಧಿಗೆ ಸಹಕಾರಿ: ತೇಜಸ್ವಿನಿ ಅಭಿಮತ

ಬೆಂಗಳೂರು: ಸಹಭಾಗಿತ್ವದ ಆವಿಷ್ಕಾರಗಳಿಂದ ಕೃಷಿ ಕ್ಷೇತ್ರದ ಬಹಳಷ್ಟು ಸಮಸ್ಯೆಗಳನ್ನು ಸುಲಭವಾಗಿ ಪರಿಹರಿಸಬಹುದು. ಈ ನಿಟ್ಟಿನಲ್ಲಿ ಹಲವಾರು ಕ್ಷೇತ್ರಗಳ ತಂತ್ರಜ್ಞರು ಒಟ್ಟಾಗಿ ಕಾರ್ಯನಿರ್ವಹಿಸಬೇಕಾಗಿದೆ ಎಂದು ಅದಮ್ಯ ಚೇತನ ಮುಖ್ಯಸ್ಥೆ ಡಾ. ತೇಜಸ್ವಿನಿ ಅನಂತಕುಮಾರ್ ಅಭಿಪ್ರಾಯಪಟ್ಟರು. ಅನಂತಕುಮಾರ್ ಪ್ರತಿಷ್ಠಾನ ಆಯೋಜಿಸಿದ್ದ 10ನೇ ನೇಷನ್ ಫಸ್ಟ್ ಡೈಲಾಗ್ಸ್-ಸಹಭಾಗಿತ್ವದ ಆವಿಷ್ಕಾರಗಳು ವೆಬಿನಾರ್‌ನಲ್ಲಿ ಭಾಗವಹಿಸಿ ಮಾತನಾಡಿ, ಆವಿಷ್ಕಾರ ಮಾಡುವುದನ್ನು ನೂತನ ಮಂತ್ರವನ್ನಾಗಿಸಿಕೊಳ್ಳಲು ಮೋದಿ ಕರೆ ನೀಡಿದ್ದು, ಯುವ ಪೀಳಿಗೆ ಈ ಬಗ್ಗೆ ಹೆಚ್ಚಿನ ಗಮನ ನೀಡಬೇಕಾಗಿದೆ ಎಂದು



ತಿಳಿಸಿದರು. ದಿ ಅಗ್ರಿ ಕೊಲ್ಯಾಬೊರೇಟರಿ ಸಂಸ್ಥೆಯ ಸಂಸ್ಥಾಪಕ ನಿಪುಣ್ ಮೆಹತ್ರೋತ್ರಾ ಮಾತನಾಡಿ, ಡಿಜಿಟಲ್ ಕ್ಷೇತ್ರದಲ್ಲಿ ಆಗುತ್ತಿರುವ ಹಲವಾರು ಆವಿಷ್ಕಾರಗಳು ಕೃಷಿ ಕ್ಷೇತ್ರದಲ್ಲೂ ಪ್ರಮುಖ ಬದಲಾವಣೆ ಕಾಣಬಹುದು ಎಂದರು.

ಎಐಸಿಟಿಇ ನ ಸಿಒಒ ಡಾ. ಬುದ್ಧ ಚಂದ್ರಶೇಖರ್ ಮಾತನಾಡಿ, ನೂತನ ಶಿಕ್ಷಣ ನೀತಿಯಲ್ಲಿ ಮಕ್ಕಳನ್ನ ಸಂಶೋಧನೆಯತ್ತ ಹೆಚ್ಚಿನ ಗಮನ ಹರಿಸುವಂತೆ ಮಾಡಲಾಗಿದೆ. ಸಹಭಾಗಿತ್ವದ ಆವಿಷ್ಕಾರಗಳು ಪ್ರಮುಖ ಪಾತ್ರವನ್ನು ವಹಿಸಲಿದ್ದು, ಭಾರತ ವಿಶ್ವದ ಆವಿಷ್ಕಾರಗಳ ರಾಜಧಾನಿಯಾಗಬೇಕು ಎಂದು ಹೇಳಿದರು.

ಅನಂತಕುಮಾರ್ ಪ್ರತಿಷ್ಠಾನದ ಅಧ್ಯಕ್ಷ ಪ್ರೊ.ಪಿ.ವಿ ಕೃಷ್ಣಭಟ್, ಅದಮ್ಯ ಚೇತನ ಟ್ರಸ್ಟಿ ಪ್ರದೀಪ್ ಒಕ್, ಹಿರಿಯ ಪತ್ರಕರ್ತ ರಾಘವನ್ ಶ್ರೀನಿವಾಸನ್ ಸೇರಿದಂತೆ ದೇಶದ ವಿವಿಧ ಭಾಗಗಳಿಂದ ಸುಮಾರು 800 ಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು.

29.08.2022
Udayavani P.05

ಕ್ಷೀರೋತ್ಪಾದನೆಯಲ್ಲಿ ಭಾರತ ನಂ.1

ನವದೆಹಲಿ: ಹಾಲು ಉತ್ಪಾದನೆಯಲ್ಲಿ ಭಾರತವು ವಿಶ್ವದಲ್ಲೇ ಅಗ್ರಸ್ಥಾನದಲ್ಲಿದೆ. 2021 ರಲ್ಲಿ 209.96 ಮಿಲಿಯನ್ ಟನ್‌ಗಳನ್ನು ಉತ್ಪಾದನೆಯಾಗಿದೆ. ವಿಶ್ವದಲ್ಲಿ ಭಾರತದ ಡೈರಿ ಉತ್ಪನ್ನಗಳ ಪಾಲು ಶೇಕಡಾ 21 ರಷ್ಟಿದೆ. 2020-21ರಲ್ಲಿ ತಲಾ ಬಳಕೆ ದಿನಕ್ಕೆ 427 ಗ್ರಾಂ. ನಷ್ಟಿದೆ.

ಹಾಲು ಉತ್ಪಾದನೆಯಲ್ಲಿ ಭಾರತ ವಿಶ್ವದಲ್ಲೇ ಮೊದಲ ಸ್ಥಾನದಲ್ಲಿದೆ ಎಂಬುದು ಗಮನಾರ್ಹ. ಪ್ರಧಾನಿ ನರೇಂದ್ರ ಮೋದಿ ಅವರು 305 ಕೋಟಿ ರೂ ವೆಚ್ಚದಲ್ಲಿ ಗುಜರಾತ್‌ನ ಹಿಮ್ಮತ್‌ನಗರ ಪಟ್ಟಣದ ಬಳಿ ಸಬರಕಾಂತ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಒಕ್ಕೂಟಕ್ಕೆ ಸೇರಿದ ಹಾಲು ಉತ್ಪಾದನಾ ಘಟಕ ಡೈರಿಯನ್ನು ಇತ್ತೀಚೆಗೆ ಉದ್ಘಾಟಿಸಿದರು. ಇದು ಅಮುಲ್ ಬ್ರಾಂಡ್ ಅಡಿಯಲ್ಲಿ ಡೈರಿ ಉತ್ಪನ್ನಗಳನ್ನು ತಯಾರಿಸುತ್ತದೆ.



29.08.2022
Vishwavani P.01